## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
## ಸಿ.ಸಿ.517/2024

| | | |
|---|---|---|
| ಸಾಕ್ಷಿದಾರರ ಹೆಸರು | : ರಂಜಿತ್ ಹೆಚ್.ಹೆಚ್. | ಫ್ರಾಸಾ-1 |
| ತಂದೆಯ ಹೆಸರು | : ಹೊಂಬಾಳಯ್ಯ | ಚಾಸಾ-1 |
| ವಯಸ್ಸು | : 36 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : DRFO, ಮೂಡಿಗೆರೆ | ದಿನಾಂಕಃ 31.10.2025. |
| ವಾಸಸ್ಥಳ | : ಮೂಡಿಗೆರೆ. | |

### :ಮುಖ್ಯ ವಿಚಾರಣೆ: ಫ್ರಾಜ್ಞ್ಯಾ.ಸ.ಸ.ಅ. ರವರಿಂದ:

ನಾನು ಆಲ್ದೂರು ಅರಣ್ಯ ವಲಯದ ಸಾರಗೋಡ ಅರಣ್ಯ ಶಾಖೆಯಲ್ಲಿ 2016 ರಿಂದ 2025 ರ ಜನವರಿ ವರೆಗೂ DRFO ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ-2 ರಿಂದ 18 ರವರ ಪರಿಚಯ ನನಗಿದೆ.

ದಿ.20.11.2022 ರಂದು ನಾನು ಕರ್ತವ್ಯದಲ್ಲಿ ಇದ್ದಾಗ ಬೆ.7.30 ಗಂಟೆ ಸಮಯಕ್ಕೆ ಚಾಸಾ-17 ರವರು ಕುಂದೂರಿನಲ್ಲಿನ ನನ್ನ ವಸತಿ ಗೃಹಕ್ಕೆ ಬಂದು ಎಸ್ಟೇಟ್ ಕುಂದೂರಿನ ಹುಲ್ಲೆಮನೆಯಲ್ಲಿ ಕಾಡಾನೆ ದಾಳಿಯಿಂದ ಶೋಭ ಎನ್ನುವವರು ಮೃತ ಪಟ್ಟಿದ್ದಾರೆ ಎಂದು ಆ ಸ್ಥಳಕ್ಕೆ ಹೋಗೋಣ ಎಂದು ಹೇಳಿದರು. ನಂತರ ನಾವು ಬೈಕ್ ನಲ್ಲಿ ಹುಲ್ಲೆಮನೆಗೆ ಹೋದಾಗ ಸ್ಥಳದಲ್ಲಿದ ಉದ್ರಿಕ್ತ ಜನರು ಕಲ್ಲು ಮತ್ತು ಚಪ್ಪಲಿಯಿಂದ ಚಾಸಾ-17 ರವರ ಬಲಭುಜಕ್ಕೆ ಹೊಡೆದು ಹಲ್ಲೆ ಮಾಡಿರುತ್ತಾರೆ. ಈ ಕಾರಣ ನಾನು ಚಾಸಾ-17 ರವರನ್ನು ಚಿಕಿತ್ಸೆ ಪಡೆದುಕೊಳ್ಳಿ ಎಂದು ಆಲ್ದೂರಿಗೆ ಕಳುಹಿಸಿದೆ. ನಂತರ ಸ್ಥಳದಲ್ಲಿ ಇದ್ದ ಚಾಸಾ-18 ರವರೊಂದಿಗೆ ನಾನು ಮೃತ ದೇಹ ಇದ್ದ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ನಮ್ಮ ಇಲಾಖಾ ಮೇಲಾಧಿಕಾರಿಗಳು ಹಾಗೂ ಪೋಲಿಸರು ಇದ್ದರು. ಸ್ಥಳದಲ್ಲಿ ಇದ್ದ ಉದ್ರಿಕ್ತ ಜನರು DCF ಚಿಕ್ಕಮಗಳೂರು ಹಾಗೂ ಶಾಸಕರು ಬರಬೇಕು ಎಂದು ಪ್ರತಿಭಟನೆ ಮಾಡಿ ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದರು. ಆ ದಿನ ಮದಾಹ್ನ 2.30 ರ ಸಮಯಕ್ಕೆ DCF ರವರು ಸ್ಥಳಕ್ಕೆ ಬಂದಿದ್ದು, ನಂತರ ಮ.3.30 ರ ಸಮಯಕ್ಕೆ ಶಾಸಕರು ಅಲ್ಲಿಗೆ ಬಂದರು. ಆ ಸಮಯಕ್ಕೆ ಜನರ ಪ್ರತಿಭಟನೆ ಜೋರಾಗಿದ್ದು ನೂಕಾಟ ಮತ್ತು ತಲ್ಲಾಟ ಜೋರಾಯಿತು. ಆಗ ಪೋಲಿಸ್ ಇಲಾಖೆಯ ಅಧಿಕಾರಿಗಳು ಶಾಸಕರನ್ನು ರಕ್ಷಣೆ ಮಾಡಿ ಚಿಕ್ಕಮಗಳೂರು ಅರಣ್ಯ ವಲಯಕ್ಕೆ ಸೇರಿದ KA-18-G-0997 ಜೀಪ್ ನ ಬಳಿ ಕರೆದುಕೊಂಡು ಹೋಗಿ ಅದರಲ್ಲಿ ಕೂರಿಸಿದಾಗ ಉದ್ರಿಕ್ತ ಜನರು ಆ ಜೀಪಿಗೆ ಕಲ್ಲಿನಿಂದ ಹೊಡೆದಿದ್ದು ಈ ಕಾರಣ ಜೀಪಿನ ಗಾಜುಗಳು ಜಖಂಗೊಂಡವು. ಈ ವಿಚಾರವನ್ನು ನಾನು ಮೇಲಾಧಿಕಾರಿಗಳಿಗೆ ತಿಳಿಸಿದ್ದು ಅವರ ನಿರ್ದೇಶನದಂತೆ ಆ ದಿನ ಮ.5.45 ರ ಸಮಯಕ್ಕೆ ಮೂಡಿಗೆರೆ ಪೋಲಿಸ್ ಠಾಣೆಗೆ ಹೋಗಿ ದೂರು ದಾಖಲಿಸಿದ್ದೇನೆ. ಜೀಪಿಗೆ ಆದ ಜಖಂ ನಿಂದ ಅಂದಾಜು ರೂ.60,000/- ಉಂಟಾಗಿದೆ.

ದೂರಿನಲ್ಲಿ ಚಾಸಾ-17 ರವರಿಗೆ ಹಲ್ಲೆಯದಾ ಬಗ್ಗೆ ತರಾತುರಿಯಲ್ಲಿ ತಿಳಿಸದ ಕಾರಣಅ ಈ ಸಂಬಂಧ ದಿ.22.11.2022 ರಂದು ನಾನು ಪೋಲಿಸರ ಮುಂದೆ ನನ್ನ ಮುಂದುವರೆದ ಹೇಳಿಕೆ ನೀಡಿದ್ದೇನೆ. ದಿ.23.11.2022 ರಂದು ಕೃತ್ಯ ನಡೆದ ಸ್ಥಳವನ್ನು ಚಾಸಾ-2 ಮತ್ತು 3 ರವರ ಸಮಕ್ಷಮ ಪೋಲಿಸರಿಗೆ ತೋರಿಸಿದ್ದು, ಮ.12.00 ರಿಂದ 1.00 ಗಂಟೆಯವರೆಗೂ ಸ್ಥಳಮಹಜರ್ ಬರೆದು

ಫೋಟೋ ತೆಗೆಸಿದ್ದಾರೆ. ನಂತರ ಶಾಸಕರಿಗೆ ಹಲ್ಲೆಯಾದ ಸ್ಥಳವನ್ನು ತೋರಿಸಿದ ಮೇರೆಗೆ ಮ.1.15 ರಿಂದ 2.15 ರವರೆಗೂ ಸ್ಥಳಮಹಜರ್ ಮಾಡಿ ಫೋಟೋಗಳನ್ನು ತೆಗೆದು ಆ ಸ್ಥಳದಲ್ಲಿ ಸಿಕ್ಕ 4 ಹೋಡ್ರಸ್ ಕಲ್ಲುಗಳನ್ನು ವಶಕ್ಕೆಪಡೆದಿದ್ದಾರೆ.

ಸಾಕ್ಷಿಯು ದಿ.20.11.2022 ರ ದೂರು, ಪ್ರ.ವ.ವರದಿ, ದಿ.23.11.2022 ರ ಎರಡು ಸ್ಥಳ ಮಹಜರ್ ಗಳು ಹಾಗೂ 3 ಫೋಟೋಗಳನ್ನು ನೋಡಿ ಅವುಗಳನ್ನು ಮಹಜರ್ ಕಾಲಕ್ಕೆ ತೆಗೆದ ಬಗ್ಗೆ ಗುರುತಿಸುತ್ತಾರೆ. ಸದರಿ ದಾಖಲೆಗಳನ್ನು ನಿಪಿ-1 ರಿಂದ 4, ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 4(ಎ), ಫೋಟೋಗಳನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-5 ರಿಂದ 9 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 4 ಕಲ್ಲುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಎಂ.ಓ.1 ರಿಂದ 4 ಎಂದು ಗುರುತಿಸಲಾಯಿತು, ಕಲ್ಲುಗಳನ್ನು ಇರಿಸಿರುವ ಬ್ಯಾಗ್ ನ್ನು ಎಂ.ಓ.5, ಅದರ ಮೇಲಿನ ಸಾಕ್ಷಿಯ ಸಹಿಯನ್ನು ಎಂ.ಓ.5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 1 ರಿಂದ 3, 5 ರಿಂದ 9, 11 ರಿಂದ 23 ನೇ ಆರೋಪಿತರನ್ನು ನೋಡಿ ಘಟನಾ ಸ್ಥಳದಲ್ಲಿ ಇದ್ದ ಜನರು ಇವರೇ ಎಂದು ಗುರುತಿಸುತ್ತಾರೆ. 4 ಮತ್ತು 10 ನೇ ಆರೋಪಿತರು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿತರ ಪರ ವಕೀಲರು ತಿಳಿಸುತ್ತಾರೆ. ಸಾಕ್ಷಿಯು ಮುಂದುವರೆದ ಆರೋಪಿತರನ್ನು TV9 ಕನ್ನಡ ನ್ಯೂಸ್ ಚಾನಲ್ ನಲ್ಲಿ ಪ್ರಸಾರಗೊಂಡ ವೀಡಿಯೋ ಆಧಾರದ ಮೇಲೆ ಚಾಸಾ-18 ರವರ ಸಹಾಯದಿಂದ ಗುರುತಿಸಿರುವುದಾಗಿ ನುಡಿಯುತ್ತಾರೆ. ಈ ಸಂಬಂಧ ಸಾಕ್ಷಿಯು ಒಂದು ಸಿಡಿಯನ್ನು ನೋಡಿ ಗುರುತಿಸಿದ್ದು, ಸದರಿ ಸಿಡಿಯನ್ನು ನಿಪಿ-10, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: 1 ರಿಂದ 10, 12, 17, 18 ಮತ್ತು 22 ನೇ ಆರೋಪಿತರ ಪರ ಶ್ರೀ ಎಂ.ಎಂ.ಆರ್. ವಕೀಲರಿಂದ:**

ಶೋಭಾರವರು ಮೃತ ಪಟ್ಟಿರುವ ಬಗ್ಗೆ ನನಗೆ ಚಾಸಾ-17 ರವರು ತಿಳಿಸಿದ್ದರು. ಆ ಸಮಯಕ್ಕೆ ನಾನು ಕುಂದೂರಿನ ನನ್ನ ವಸತಿ ಗೃಹದಲ್ಲಿ ಇದ್ದೆ. ಆ ಸ್ಥಳದಿಂದ ಕೃತ್ಯ ನಡೆದ ಸ್ಥಳಕ್ಕೆ ಸಮಾರು 10-12 ಕಿ.ಮೀ ಅಂತರ ಇರಬಹುದು. ನಾನು ವಸತಿ ಗೃಹದಿಂದ ಹೊರಟಾಗ ಬೆ.7.40 ರ ಸಮಯವಾಗಿರಬಹುದು. ಆ ಸಮಯಕ್ಕೆ ನನ್ನ ವಸತಿ ಗೃಹದ ಬಳಿ ಚಾಸಾ-17 ಮತ್ತು 18 ರವರು ಇದ್ದರು. ನಾವು ಸ್ಥಳ ತಲುಪಿದಾಗ ಬೆಳಗ್ಗೆ ಸುಮಾರು 8.30 ರ ಸಮಯವಾಗಿತ್ತು. ಆಗ ಸ್ಥಳದಲ್ಲಿ ಸುಮಾರು 80-100 ಜನರು ಸೇರಿದ್ದರು. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಹೆಸರನ್ನು ಈಗ ನನ್ನಿಂದ ಹೇಳಲು ಆಗುವುದಿಲ್ಲ. ಆರೋಪಿತರ ಹೆಸರನ್ನು ಚಾಸಾ-18 ರವರು ನನಗೆ ತಿಳಿಸಿದ್ದರು. ಶಾಸಕರು ಮ.3.30 ಕ್ಕೆ ಸ್ಥಳಕ್ಕೆ ಬಂದಿದ್ದು, ಅವರು ಬಂದ 1-2 ನಿಮಿಷಕ್ಕೆ ಗಲಾಟೆ ಜಾಸ್ತಿಯಾಗಿತ್ತು. ಶಾಸಕರು ಯಾವ ವಾಹನದಲ್ಲಿ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಶಾಸಕರೊಂದಿಗೆ ಅವರ ಇಬ್ಬರು ಸಿಬ್ಬಂದಿಗಳು ಬಂದಿದ್ದರು, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಶಾಸಕರಿಗೆ ಹಲ್ಲೆ ಮಾಡಲು ಹೋಗಿದ್ದ ಗುಂಪಿನಿನಲ್ಲಿ 20-30 ಜನರು ಇದ್ದರು. ದೂರಿನಲ್ಲಿ 30 ಜನರು ಇದ್ದರು ಎಂದು ಬರೆದಿದ್ದೇನೆ.

ನಾನು ಇಲಾಖಾ ಬೈಕ್ ನಲ್ಲಿ ಸ್ಥಳಕ್ಕೆ ಹೋಗಿದ್ದೆ. ಚಾಸಾ-17 ರವರ ನನ್ನೊಂದಿಗೆ ಬಂದಿದ್ದರು

ಹಾಗೂ ಚಾಸಾ-18 ರವರು ಪ್ರತ್ಯೇಕ ಬೈಕ್ ನಲ್ಲಿ ಸ್ಥಳಕ್ಕೆ ಬಂದಿದ್ದರು. ಈ ವಿಚಾರವನ್ನು ದೂರಿನಲ್ಲಿ ನಮೂದಿಸಿದ್ದೇನೆ. ಚಾಸಾ-8 ಮತ್ತು 9 ರವರು ಬೆಳಗ್ಗೆ ಸುಮಾರು 8.30 ರ ಸಮಯಕ್ಕೆ ಸ್ಥಳಕ್ಕೆ ಬಂದಿದ್ದರು. ಅವರು ತಮ್ಮ ತಮ್ಮ ಇಲಾಖಾ ಜೀಪ್ ಗಳಲ್ಲಿ ಬಂದಿದ್ದರು. ಸದರಿ ಜೀಪ್ ಗಳನ್ನು ಹುಲ್ಲೆಮನೆಯ ರಸ್ತೆಯ ಬದಿಯಲ್ಲಿ ನಿಲ್ಲಿಸಿದ್ದರು. KA-18-G-0997 ಚಿಕ್ಕಮಗಳೂರು ವಲಯಕ್ಕೆ ಸೇರಿದ ಜೀಪಾಗಿದೆ. ಶಾಸಕರನ್ನು ಆ ಜೀಪ್ ನ ಬಳಿ ಕರೆದುಕೊಂಡು ಹೋಗಿದ್ದಾಗ ಸಂಜೆ ಸುಮಾರು 3.45 ರ ಸಮಯವಾಗಿತ್ತು. ಜೀಪ್ ನ ಗಾಜು ಪುಡಿಗಳನ್ನು ಪೋಲಿಸರು ನನ್ನ ಸಮಕ್ಷಮ ವಶಕ್ಕೆ ಪಡೆದುಕೊಂಡಿಲ್ಲ. ಜೀಪ್ ಚಾಲಕರಿಗೆ ಅವಾಚ್ಯ ಶಬ್ದಗಳಿಂದ ಬೈದ ವ್ಯಕ್ತಿ ಯಾರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಇಂತಹ ವ್ಯಕ್ತಿಗಳೇ ಜೀಪ್ ಗೆ ಕಲ್ಲಿನಿಂದ ಹೊಡೆಯುತ್ತಿದ್ದರು ಎಂದು ನಿಖರವಾಗಿ ನನ್ನಿಂದ ಹೇಳಲು ಆಗುವುದಿಲ್ಲ. ಗುಂಪಿನಲ್ಲಿ ಇದ್ದ ಜನರು ನಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು, ಸದರಿ ಜನರ ಹೆಸರನ್ನು ಹೇಳಲು ಆಗುವುದಿಲ್ಲ.

ಚಾಸಾ-18 ರವರು ಹೇಳಿದ ಮೇರೆಗೆ ನಾನು ಆರೋಪಿತರ ಹೆಸರು ಮತ್ತು ವಿಳಾಸವನ್ನು ಪೋಲಿಸರಿಗೆ ನೀಡಿದ್ದೇನೆ ಎಂದರೆ ಸರಿ. ಚಾಸಾ-18 ರವರು ನೋಡಿದ್ದ ವೀಡಿಯೋವನ್ನು ಹಾಜರುಪಡಿಸಲಾಗಿದೆ. ಈ ಪ್ರಕರಣದ ಆರೋಪಿತರು ನಾನು ಹೇಳಿದಂತೆ ನಮಗೆ ಬೈದು ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಹಾಗೂ ಯಾವುದೇ ಜೀಪ್ ನ ಗಾಜನ್ನು ಪುಡಿ ಮಾಡಿಲ್ಲ ಎಂದರೆ ಸರಿಯಲ್ಲ. ಜೀಪ್ ನ ಗಾಜುಗಳು ಪುಡಿಯಾದ ಬಗ್ಗೆ ಪೋಲಿಸರು ನನ್ನ ಸಮಕ್ಷಮ ಫೋಟೋಗಳನ್ನು ತೆಗೆದಿಲ್ಲ. ನಾನೇ ಅಂದಾಜಿನಿಂದ ರೂ.60,000/- ನಷ್ಟವಾಗಿದೆ ಎಂದು ಹೇಳಿದ್ದೇನೆ. ಆ ಹಣವನ್ನು ಆರೋಪಿತರಿಂದ ಪಡೆದುಕೊಳ್ಳುವ ದುರುದ್ದೇಶ ಹೊಂದಿದ್ದೇನೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಇದ್ದ ಕಲ್ಲುಗಳು ಹಿಡಿಗಾತ್ರದ್ದಾಗಿತ್ತು. ಸ್ಥಳಕ್ಕೆ ಬರುವಂತೆ ಪೋಲಿಸರು ನನಗೆ ನೋಟೀಸು ಕೊಟ್ಟಿದ್ದರು. ಆ ನೋಟೀಸನ್ನು ದಿ.21.11.2022 ರಂದು ಮದಾಹ್ನ 2.30 ಕ್ಕೆ ನನ್ನ ವಸತಿ ಗೃಹದ ಬಳಿ ಕೊಟ್ಟಿದ್ದರು. ಆ ನೋಟೀಸು ಪೋಲಿಸ್ ಕಾನ್ಸ್ಟೇಬಲ್ ಮಲ್ಲಿಕಾರ್ಜುನ್ ಮತ್ತು ಮತ್ತೊಬ್ಬರು ತಂದಿದ್ದರು. ದಿ.23.11.2022 ರಂದು ಮ.12.00 ಕ್ಕೆ ಸ್ಥಳದಲ್ಲಿ ಹಾಜರಿದ್ದೆ. ಚಾಸಾ-2 ಮತ್ತು 3 ರವರು ನಾನು ಸ್ಥಳಕ್ಕೆ ಹೋಗುವ ಮುನ್ನ ಅಲ್ಲಿ ಇದ್ದರು.

ಮಹಜರ್ ನ್ನು ಇಬ್ಬರು ಪೋಲಿಸರು ಬರೆದಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಜಖಂಗೊಂಡ ಜೀಪ್ ಇದ್ದ ಸ್ಥಳದ ಉತ್ತರ-ದಕ್ಷಿಣಕ್ಕೆ ಕುಂದೂರು-ಮೂಡಿಗೆರೆ ರಸ್ತೆ, ಪೂರ್ವಕ್ಕೆ ರವಿಗೌಡ ರವರ ತೋಟ ಇತ್ತು, ಪಶ್ಚಿಮಕ್ಕೆ ಏನಿತ್ತು ಎಂದು ಈಗ ನನಗೆ ನೆನಪಿಲ್ಲ. ಮಹಜರ್ ಕಾಲದ ಫೋಟೋಗಳನ್ನು ಪೋಲಿಸ್ ಸಿಬ್ಬಂದಿ ತೆಗೆದಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಫೋಟೋಗಳನ್ನು ಇಲಾಖಾ ಕ್ಯಾಮೆರಾ ಮತ್ತು ಮೊಬೈಲ್ ಗಳಲ್ಲಿ ತೆಗೆಯಲಾಗಿದೆ. ನಾನು ಗುರುತಿಸಿರುವ ಫೋಟೋಗಳನ್ನು ಪ್ರಕರಣಕ್ಕೆ ಉಪಯೋಗವಾಗುವಂತೆ ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಫೋಟೋಗಳನ್ನು ತೆಗೆದ ವ್ಯಕ್ತಿ ಮಹಜರ್ ಗಳಿಗೆ ಸಹಿ ಮಾಡಿದ್ದಾರೆ. ಮಹಜರ್ ಗಳಿಗೆ 6 ಜನ ಸಹಿ ಮಾಡಿದ್ದಾರೆ. ಮಹಜರ್ ಗಳನ್ನು ಎಷ್ಟು ಪುಟಗಳಲ್ಲಿ ಬರೆಯಲಾಯಿತು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಮಹಜರ್ ಗಳ ಪ್ರತೀಪುಟದಲ್ಲಿ ನನ್ನ ಸಹಿಗಳನ್ನು ಪಡೆದಿಲ್ಲ. ನಿಪಿ-3 ಮತ್ತು 4 ರಲ್ಲಿ ಆರು ಜನರ ಸಹಿ ಇಲ್ಲ ಎಂದರೆ ಸರಿ. ಈ ದಿನ ಶೃಂಗೇರಿಯಲ್ಲಿ ಆನೆ ದಾಳಿಯಿಂದ ಇಬ್ಬರು ರೈತರು ಮೃತಪಟ್ಟಿದ್ದಾರೆ ಎಂದರೆ ಸರಿ. ಮೂಡಿಗೆರೆ ತಾಲ್ಲೂಕಿನಲ್ಲಿ 7 ಕ್ಕೂ ಹೆಚ್ಚು ಜನರು ಆನೆ ದಾಳಿಯಿಂದ ಮೃತರಾಗಿದ್ದಾರೆ ಎಂದರೆ ಸರಿ. ಅಂತಹ

ಸಮಯದಲ್ಲಿ ಮೃತರ ಸಂಬಧಿಕರು ಹಾಗೂ ಗ್ರಾಮಸ್ಥರು ಉದ್ರಿಕ್ತರಾಗಿ ಚುನಾಯಿತ ಪ್ರತಿನಿಧಿಗಳಿಂದ ನ್ಯಾಯ ಕೇಳುತ್ತಾರೆ ಎಂದರೆ ಸರಿ. ಅಂತಹ ಘಟನೆಯಾದಾಗ ನಾವು ಸಂಯಮದಿಂದ ಇರಬೇಕು ಎಂದರೆ ಸರಿ. ಆರೋಪಿತರು ಶಾಸಕರು ಮೇಲೆ ಹಲ್ಲೆ ಮಾಡಲು ಯತ್ನಿಸಿದಾಗ ನಾವು ಅವರನ್ನು ಕರೆದುಕೊಂಡು ಹೋದಾಗ ಜೀಪ್ ನ್ನು ಜಖಂ ಮಾಡಿದ್ದಾರೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ಸ್ಥಳದಲ್ಲಿ ಇತ್ತು ಎನ್ನಲಾದ 4 ಕಲ್ಲುಗಳನ್ನು ಪ್ರತ್ಯೇಕವಾಗಿ ಇರಿಸಿ ಪೋಟೋ ತೆಗೆದಿಲ್ಲ. ಕಲ್ಲುಗಳ ಮೇಲೆ ಪ್ರಕರಣ ಸಂಖ್ಯೆ ಮತ್ತು ಕ್ರ.ಸಂ.ಗಳನ್ನು ಪಡೆದಿರಲಿಲ್ಲ. ನಾನು ಗುರುತಿಸಿರುವ ಮಹಜರ್ ಗಳಿಗೆ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಹೊಡೆದು ಹೋಗಿದ್ದ ಗಾಜಿನ ಚೂರುಗಳು ಕಂಡುಬಂದಿರಲಿಲ್ಲ. ಸ್ಥಳದಲ್ಲಿ ಇದ್ದ ಜನರು ಇಲಾಖಾ ಜೀಪಿನ ಗಾಜನ್ನು ಹೊಡೆದು ಹಾಕಿದ್ದರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಚಾಸಾ-18 ರವರು ಆರೋಪಿತರ ವಿರುದ್ದ ದ್ವೇಷ ಭಾವನೆ ಹೊಂದಿದ್ದಾರೆ ಎಂದರೆ ಸರಿಯಲ್ಲ. ಚಾಸಾ-18 ರವರ ಹೇಳಿಕೆಯಂತೆ ನಾನು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎಂ.ಒ.1 ರಿಂದ 4 ನ್ನು ಪ್ರಕರಣಕ್ಕೆ ಉಪಯೋಗವಾಗುವಂತೆ ಸೃಷ್ಟಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: ಉಳಿದ ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.</u>**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.